# I Semester B.Com. Examination, February/March 2023
## (NEP) (Semester Scheme)
## COMMERCE
## Paper – 1.1 : Financial Accounting

Time : 2½ Hours Max. Marks : 60

***Instructions :*** *1) Answer should be written* ***completely*** *in* ***Kannada*** *or in* ***English****.*
*2) Under Section –* ***D*** *answer* ***any one*** *sub-question.*

SRI BHAGAWAN MAHAVEER JAIN FIRST GRADE COLLEGE KGF - 563 122

## SECTION – A

1. Answer **any five** sub-questions. **Each** sub-question carries **two** marks. **(5×2=10)**
   a) Mention any 4 Accounting Conventions.
   b) Name any four Internal Users of Accounting Information.
   c) Why is Hire Purchase Price always higher than the Cash Price ?
   d) State any 4 contents of a Hire Purchase Agreement.
   e) What are Departmental Accounts ? Why are they prepared ?
   f) State any 2 objects of Branch Accounts.
   g) The Bangalore H.O. sends goods to its Hubli Branch at a profit of 20% on cost. If Bangalore HO sends it for Rs. 1,20,000. Calculate Loading.

## SECTION – B

Answer **any 3** questions. **Each** question carries **four** marks. **(3×4=12)**

2. Explain any four Accounting Concepts.
3. Mr. Arun purchased a Motor Bike on HPS on 01/04/2022. Total cash price of the Motor Bike was Rs. 63,920, payable Rs. 15,920 as down payment and 3 installment of Rs. 16,000 each year plus interest at 5% payable at the end of the year. Calculate Interest payable for 3 years.

4. State the basis of allocation in the following in Departmental Accounting.

   a) Depreciation on Machinery

   b) Commission on Sales

   c) Bad debts

   d) Carriage inwards

   e) Lighting charges

   f) Employees Insurance Premium

   g) Advertisement

   h) Canteen Expenses.

5. The Bangalore Shoe Company has a Branch at KGF. The following are the transactions between the HO and Branch during the year 2021-22.

| | | |
|---|---|---|
| Stock at branch on 01-04-2021 | | 750 |
| Petty cash at branch on 01-04-2021 | | 200 |
| Cheques sent to Branch : | | |
| For Salaries | 1,000 | |
| For Rent | 2,000 | |
| For Petty cash | 300 | 3,300 |
| Cash remitted to H.O. | | 18,000 |
| Goods received from H.O. | | 13,000 |
| Stock on 31-03-2022 | | 1,000 |
| Petty cash on 31-03-2022 | | 150 |

Prepare the KGF Branch A/c in the books of H.O.

6. Calculate the amount, the Interest included in each Installment of HPS. Cash price Rs. 1,50,000, Down payment Rs. 45,000, 3 Annual Installment of Rs. 60,000, Rs. 45,000 and Rs. 30,000 respectively payable at the end of each year.

SRI BHAGAWAN MAHAVEER JAIN ... KGF - 563

## SECTION – C

Answer **any 3** questions. **Each** question carries **ten** marks. **(3×10=30)**

7. Transaction of Aravind are given below. Show the effects of these transactions on Assets, Liabilities and Capital with the help of Accounting Equation.

| | |
|---|---|
| a) Commenced Business with Cash | 2,50,000 |
| b) Purchased Furniture for Cash | 35,000 |
| c) Purchased Goods for Cash | 40,000 |
| d) Sold Goods {Costing Rs. 20,000} for Cash | 26,000 |
| e) Paid Commission | 2,000 |
| f) Received Interest | 10,000 |
| g) Withdraw for Personal Use | 5,000 |
| h) Deposited Cash into Bank | 10,000 |
| i) Sold Goods on Credit | 10,000 |

8. On 01-01-2020 R and Company purchased machine under HPS. The cash price was Rs. 17,000 payable as under Rs. 2,000 on signing the agreement and the balance in 3 installments of Rs. 5,000 each together with interest at 8% p.a. on 31st of December each year. The Asset is depreciated at 10% p.a. on original cost method. Prepare Machine Account and Hire Seller Account.

9. From the following information of Royal Department stores, prepare the Department Trading and P/L for the year ending 31-12-2022 :

| **Particulars** | **Dept. X** | **Dept. Y** | **Total** |
|---|---|---|---|
| Opening stock | 6,000 | 5,000 | 11,000 |
| Purchases | 62,000 | 31,000 | 93,000 |
| Sales | 1,01,500 | 76,000 | 1,77,500 |
| Return outward | 2,000 | 1,000 | 3,000 |
| Wages | 4,000 | 7,500 | 11,500 |
| Return inwards | 1,500 | 1,000 | 2,500 |
| Salary to office staff | – | – | 25,000 |
| Rents and Taxes | – | – | 4,500 |
| Discount allowed | – | – | 3,500 |
| Discount earned | – | – | 2,500 |
| Carriage outwards | – | – | 1,400 |
| General expenses | – | – | 4,200 |

**Other information :**

1) Number of Office staff : Dept. X – 8 and Dept. Y – 12.
2) Area occupied : Dept. X 400 sq.ft and Dept. Y 800 sq.ft.
3) Depreciation on Machinery worth Rs. 50,000 at 10% and on Furniture with Rs. 15,000 at 20% and to be distributed between the departments equally.
4) Stock of goods on 31st December 2022 Dept. X Rs. 8,000 and Dept. Y Rs. 4,000.
5) Inter Department transfer : Dept. X to Dept. Y Rs. 10,000 which is not included in the above information.
6) Exclude the inter department transfer for the calculation of ratio.

10. The following particulars are relating to Bengaluru Branch for the year ended 31-12-2022. Prepare Branch account in the books of Head Office.

| **Particulars** | | **Amount** |
|---|---|---|
| Stock at the Branch on 1-1-2022 | | 30,000 |
| Debtors at the Branch on 1-1-2022 | | 60,000 |
| Petty cash at the branch on 1-1-2022 | | 600 |
| Goods sent to Branch during 2022 | | 5,04,000 |
| Cash sales 2022 | | 1,20,000 |
| Received from debtors 2022 | | 4,20,000 |
| Credit sales during 2022 | | 4,56,000 |
| Cheques sent to Branch : | | |
| For Salaries | 18,000 | |
| For Rent and Rate | 3,000 | |
| For Petty cash | 2,200 | 23,200 |
| Goods returned by the Branch | | 4,000 |
| Stock at the branch on 31-12-2022 | | 50,000 |
| Petty cash 31-12-2022 | | 400 |
| Debtors on 31-12-2022 | | 96,000 |

11. Ganesh Traders, Malur invoiced Goods to their KGF Branch at 20% Profit on Sale. Branch is advised to deposit cash everyday to HO A/c and payments are made by HO except petty expenses which are met by Branch Manager. From the following particular, prepare Branch A/c to ascertain P/L of the Branch.

| **Particulars** | | **Amount** |
|---|---|---|
| Stock on 1-1-2022 (Invoice Price) | | 15,000 |
| Petty Cash on 1-1-2022 | | 300 |
| Debtors on 1-1-2022 | | 8,500 |
| Furniture on 1-1-2022 | | 2,000 |
| Cash Sales | | 56,000 |
| Total Sales | | 88,000 |
| Cash from Debtors | | 28,500 |
| Goods sent to Branch | | 80,000 |
| Discount allowed | | 250 |
| Petty expenses | | 360 |
| Goods return by Branch | | 1,000 |
| Salary due 31-12-2022 | | 400 |
| Payments made by HO for expenses : | | |
| • For Rent | 2,400 | |
| • For Salary | 4,200 | |
| Furniture bought on 01-07-2022 | | 6,600 |
| Stock on 31-12-2022 (Invoice Price) | | 1,600 |
| B/R on 31-12-2022 | | 12,000 |
| Sales of Furniture on 01-07-2022 | | 2,000 |
| (Book value on date of sales Rs. 950) | | |
| Depreciation furniture at 10% p.a. | | 900 |

SECTION – D

Answer **any one** of the following questions. **Each** question carries **eight** marks. **(1×8=8)**

12. A) Briefly explain any 4 Indian Accounting Standards.

B) Draft an Hire Purchase Agreement between Hire Seller and Hire Purchaser for purchase of an Asset.

## ಕನ್ನಡ ಆವೃತ್ತಿ

ಸೂಚನೆಗಳು : 1) ಉತ್ತರವನ್ನು ಸಂಪೂರ್ಣವಾಗಿ ಇಂಗ್ಲೀಷ್ ಅಥವಾ ಕನ್ನಡದಲ್ಲಿ ಬರೆಯಬೇಕು.

2) ಭಾಗ – 'ಡಿ'ಯಲ್ಲಿ ಯಾವುದಾದರೂ ಒಂದು ಉಪಪ್ರಶ್ನೆಗೆ ಉತ್ತರಿಸಿ.

### ಭಾಗ – ಎ

1. ಈ ಕೆಳಗಿನ ಯಾವುದೇ ಐದು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಯು 2 ಅಂಕಗಳನ್ನು ಹೊಂದಿರುತ್ತದೆ. **(5×2=10)**

a) ಯಾವುದಾದರೂ 4 ಲೆಕ್ಕಶಾಸ್ತ್ರ ಸಂಪ್ರದಾಯಗಳನ್ನು ಪಟ್ಟಿ ಮಾಡಿ.

b) ಲೆಕ್ಕಶಾಸ್ತ್ರ ಮಾಹಿತಿಯ ಯಾವುದೇ ನಾಲ್ಕು ಆಂತರಿಕ ಬಳಕೆದಾರರನ್ನು ಹೆಸರಿಸಿ.

c) ಬಾಡಿಗೆ ಖರೀದಿ ಬೆಲೆಯು ನಗದು ಖರೀದಿ ಬೆಲೆಗಿಂತ ಯಾವಾಗಲೂ ಏಕೆ ಜಾಸ್ತಿಯಾಗಿರುತ್ತದೆ ?

d) ಬಾಡಿಗೆ ಖರೀದಿ ಒಪ್ಪಂದದ ಯಾವುದೇ ನಾಲ್ಕು ವಿಷಯಗಳನ್ನು ತಿಳಿಸಿ.

e) ವಿಭಾಗವಾರು ಲೆಕ್ಕಗಳ ಅರ್ಥವನ್ನು ತಿಳಿಸಿ. ಯಾಕೆ ಅದನ್ನು ತಯಾರಿಸುತ್ತಾರೆ ?

f) ಶಾಖೆ ಖಾತೆಗಳ 2 ಉದ್ದೇಶಗಳನ್ನು ತಿಳಿಸಿ.

g) ಬೆಂಗಳೂರಿನ ಪ್ರಧಾನ ಕಛೇರಿಯು ರೂ. 1,20,000 ಮೌಲ್ಯದ ಸರಕುಗಳನ್ನು ಅಸಲಿನ ಮೇಲೆ ಶೇ. 20ರ ಲಾಭದಲ್ಲಿ ತನ್ನ ಹುಬ್ಬಳ್ಳಿಯ ಶಾಖೆಗೆ ಕಳುಹಿಸಿದರೆ, ಲೋಡಿಂಗ್ (ಹೇರಿಕೆಯನ್ನು)ನ್ನು ಲೆಕ್ಕ ಹಾಕಿ.

### ಭಾಗ – ಬಿ

ಈ ಕೆಳಗಿನ ಯಾವುದೇ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಯು 4 ಅಂಕಗಳನ್ನು ಹೊಂದಿರುತ್ತದೆ. **(3×4=12)**

2. ಲೆಕ್ಕಶಾಸ್ತ್ರದ ಯಾವುದಾದರೂ 4 ಪರಿಕಲ್ಪನೆಗಳನ್ನು ವಿವರಿಸಿ.

3. ಶ್ರೀ. ಅರುಣ್ ಮೋಟಾರ್ ಬೈಕ್‌ನ್ನು ಬಾಡಿಗೆಗೆ ಕೊಳ್ಳುವ ಪದ್ಧತಿಯಲ್ಲಿ 01/04/2022ರಂದು ಕೊಂಡುಕೊಂಡರು. ಮೋಟಾರ್ ಬೈಕ್‌ನ ನಗದು ಬೆಲೆ ರೂ. 63,920. ರೂ. 15,920 ಗಳನ್ನು ಮುಂಗಡ ಹಣವಾಗಿ ಕೊಟ್ಟು ಉಳಿದ ಹಣವನ್ನು 3 ವಾರ್ಷಿಕ ಕಂತುಗಳಲ್ಲಿ ರೂ.16,000 ವಾರ್ಷಿಕ ಕಂತಿನಂತೆ ವರ್ಷಾಂತ್ಯದಲ್ಲಿ ಶೇಕಡ 5 ರಷ್ಟು ಬಡ್ಡಿ ಜೊತೆಯಲ್ಲಿ ಕೊಡಬೇಕು. ಮೂರು ವರ್ಷಗಳ ಬಡ್ಡಿಯನ್ನು ಲೆಕ್ಕ ಹಾಕಿ.

4. ಕೆಳಕಂಡ ವಿಭಾಗ ವೆಚ್ಚಗಳನ್ನು ಯಾವ ಆಧಾರದ ಅನ್ವಯ ಹಂಚಲಾಗುತ್ತದೆ ? ತಿಳಿಸಿ.

a) ಯಂತ್ರೋಪಕರಣದ ಮೇಲಿನ ಸವಕಳಿ

b) ಮಾರಾಟದ ಮೇಲಿನ ಕಮಿಷನ್

c) ವಸೂಲಾಗದ ಸಾಲ

d) ಒಳಸಾಗಣಿಕಾ ವೆಚ್ಚ

e) ಬೆಳಕಿನ ದೀಪದ ಖರ್ಚುಗಳು

f) ನೌಕರರ ವಿಮಾ ಕಂತು

g) ಜಾಹಿರಾತು

h) ಕ್ಯಾಂಟಿನ್ ವೆಚ್ಚ.

5. ಬೆಂಗಳೂರು ಷೂ ಕಂ.ಯು ಕೆ.ಜಿ.ಎಫ್.ನಲ್ಲಿ ತನ್ನ ಶಾಖೆಯನ್ನು ಹೊಂದಿದೆ. ಈ ಕೆಳಕಂಡ ವ್ಯವಹಾರಗಳು ಪ್ರಧಾನ ಕಛೇರಿ ಮತ್ತು ಕೆ.ಜಿ.ಎಫ್. ಶಾಖೆಯೊಂದಿಗೆ 2021-2022ರಲ್ಲಿ ನಡೆದಿದೆ.

| | | |
|---|---|---|
| 01-04-2021ರಲ್ಲಿ ಶಾಖೆಯ ಸರಕು ದಾಸ್ತಾನು | | 750 |
| 01-04-2021ರಲ್ಲಿ ಶಾಖೆಯ ಚಿಲ್ಲರೆ ನಗದು | | 200 |
| ಶಾಖೆಗೆ ಚೆಕ್ಕನ್ನು ಕಳುಹಿಸಿದ್ದು : | | |
| ಸಂಬಳಕ್ಕಾಗಿ | 1,000 | |
| ಬಾಡಿಗೆಗಾಗಿ | 2,000 | |
| ಚಿಲ್ಲರೆ ವೆಚ್ಚಕ್ಕಾಗಿ | 300 | 3,300 |
| ಪ್ರಧಾನ ಕಛೇರಿಗೆ ರವಾನಿಸಿದ ನಗದು | | 18,000 |
| ಪ್ರಧಾನ ಕಛೇರಿಯಿಂದ ಬಂದ ಸರಕು | | 13,000 |
| 31-03-2022ರಲ್ಲಿ ಸರಕು ದಾಸ್ತಾನು | | 1,000 |
| 31-03-2022ರಲ್ಲಿ ಚಿಲ್ಲರೆ ನಗದು | | 150 |

ಪ್ರಧಾನ ಕಛೇರಿಯ ಪುಸ್ತಕಗಳಲ್ಲಿ ಕೆ.ಜಿ.ಎಫ್. ಶಾಖೆಯ ಖಾತೆಯನ್ನು ತೆರೆಯಿರಿ.

6. ಬಾಡಿಗೆ ಕೊಳ್ಳುವಿಕೆ ಪದ್ಧತಿಯ ಪ್ರತಿ ಕಂತಿನಲ್ಲಿ ಇರುವ ಬಡ್ಡಿಯ ಮೊತ್ತವನ್ನು ಕಂಡುಹಿಡಿಯಿರಿ. ನಗದು ಬೆಲೆ ರೂ. 1,50,000, ಮುಂಗಡ ಪಾವತಿ ರೂ. 45,000, 3 ವಾರ್ಷಿಕ ಕಂತುಗಳಾದ ರೂ. 60,000, ರೂ. 45,000 ಮತ್ತು ರೂ. 30,000 ಕ್ರಮವಾಗಿ ಪ್ರತಿ ವರ್ಷದ ಕೊನೆಯಲ್ಲಿ ಪಾವತಿಸಲಾಗುವುದು.

## ಭಾಗ – ಸಿ

ಈ ಕೆಳಗಿನ ಯಾವುದೇ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಯು **10** ಅಂಕಗಳನ್ನು ಹೊಂದಿರುತ್ತದೆ.**(3×10=30)**

7. ಅರವಿಂದ್ ಅವರ ವಹಿವಾಟುಗಳನ್ನು ಕೆಳಗೆ ನೀಡಲಾಗಿದೆ. ಲೆಕ್ಕಶಾಸ್ತ್ರ ಸಮೀಕರಣದ ಸಹಾಯದಿಂದ ಸ್ವತ್ತುಗಳು, ಹೊಣೆಗಾರಿಕೆಗಳು ಮತ್ತು ಬಂಡವಾಳದ ಮೇಲೆ ಈ ವಹಿವಾಟುಗಳ ಪರಿಣಾಮಗಳನ್ನು ತೋರಿಸಿ.
   a) ರೂ. 2,50,000 ನಗದು ಹಣದ ವ್ಯವಹಾರ ಆರಂಭವಾಯಿತು
   b) ಪೀಠೋಪಕರಣಗಳ ನಗದು ಖರೀದಿ ರೂ. 35,000
   c) ಸರಕುಗಳ ನಗದು ಖರೀದಿ ರೂ. 40,000
   d) ರೂ. 26,000 ನಗದು ಮಾರಾಟ (ಮಾರಾಟದ ಸರಕುಗಳ ಬೆಲೆ ರೂ. 20,000)
   e) ಕಮಿಷನ್ ಪಾವತಿಸಲಾಗಿರುವುದು ರೂ. 2,000
   f) ಬಡ್ಡಿ ಪಡೆದಿರುವುದು ರೂ. 10,000
   g) ವೈಯಕ್ತಿಕ ಬಳಕೆಗಾಗಿ ಹಿಂತೆಗೆದುಕೊಂಡಿರುವುದು ರೂ. 5,000
   h) ಹಣವನ್ನು ಬ್ಯಾಂಕಿಗೆ ಠೇವಣಿ ಮಾಡಿರುವುದು ರೂ. 10,000
   i) ಸಾಲದ ಮೇಲೆ ಸರಕುಗಳನ್ನು ಮಾರಾಟ ಮಾಡಿರುವುದು ರೂ. 10,000.

8. 01-01-2020 ರಂದು ಆರ್ ಮತ್ತು ಕಂಪನಿಯು ಒಂದು ಯಂತ್ರವನ್ನು ಬಾಡಿಗೆ ಕೊಳ್ಳುವಿಕೆಯ ಪದ್ಧತಿಯಲ್ಲಿ ಖರೀದಿಸಿತು. ನಗದು ಬೆಲೆ ರೂ. 17,000 ವನ್ನು ಕೊಡುವ ವಿಧಾನ ರೂ. 2,000 ಯಂತ್ರವನ್ನು ಪಡೆದಾಗ ಮತ್ತು ಉಳಿದ ಹಣ ಮೂರು ವಾರ್ಷಿಕ ಕಂತುಗಳಲ್ಲಿ ರೂ. 5,000 ದಂತೆ ವಾರ್ಷಿಕ ಶೇ. 8ರ ಬಡ್ಡಿಯ ಜೊತೆ ಡಿಸೆಂಬರ್31 ರಂದು ಕೊಡುವುದು. ಯಂತ್ರವನ್ನು ಪ್ರತಿ ವರ್ಷ ಶೇ. 10ರ ದರದಲ್ಲಿ ಮೂಲ ಬೆಲೆ ಪದ್ಧತಿಯಲ್ಲಿ ಸವಕಳಿ ಮಾಡುವುದು.

   ಆಸ್ತಿ ಖಾತೆ ಮತ್ತು ಬಾಡಿಗೆ ಮಾರಾಟಗಾರರ ಖಾತೆಯನ್ನು ತಯಾರಿಸಿ.

9. ರಾಯಲ್ ಡಿಪಾರ್ಟ್‌ಮೆಂಟಲ್ ಮಳಿಗೆಯ ಈ ಕೆಳಗಿನ ವಿವರಗಳಿಂದ ವಿಭಾಗೀಯ ವ್ಯಾಪಾರಿ ಮತ್ತು ಲಾಭ ಮತ್ತು ನಷ್ಟ ಖಾತೆಯನ್ನು 31-12-2022ರ ವರ್ಷಾಂತ್ಯಕ್ಕೆ ತಯಾರಿಸಿ :

| ವಿವರಗಳು | ವಿಭಾಗ X ರೂ. | ವಿಭಾಗ Y ರೂ. | ಒಟ್ಟು ರೂ. |
|---|---|---|---|
| ಆರಂಭಿಕ ದಾಸ್ತಾನು | 6,000 | 5,000 | 11,000 |
| ಖರೀದಿಗಳು | 62,000 | 31,000 | 93,000 |
| ಮಾರಾಟಗಳು | 1,01,500 | 76,000 | 1,77,500 |
| ಸರಕಿನ ಹೊರ ವಾಪಸಾತಿ | 2,000 | 1,000 | 3,000 |

| | | | |
|---|---|---|---|
| ಕೂಲಿ | 4,000 | 7,500 | 11,500 |
| ಸರಕಿನ ಒಳ ವಾಪಸಾತಿ | 1,500 | 1,000 | 2,500 |
| ಕಛೇರಿ ಸಿಬ್ಬಂದಿಯ ಸಂಬಳ | – | – | 25,000 |
| ಬಾಡಿಗೆ ಮತ್ತು ತೆರಿಗೆಗಳು | – | – | 4,500 |
| ಸೋಡಿ ಕೊಟ್ಟಿದ್ದು | – | – | 3,500 |
| ಸೋಡಿ ಗಳಿಸಿದ್ದು | – | – | 2,500 |
| ಸರಕು ಹೊರಸಾಗಾಣಿಕೆ ವೆಚ್ಚ | – | – | 1,400 |
| ಸಾಮಾನ್ಯ ಖರ್ಚುಗಳು | – | – | 4,200 |

ಇತರೆ ವಿವರಗಳು :

1) ಕಛೇರಿ ಸಿಬ್ಬಂದಿ : ವಿಭಾಗ X – 8 ಮಂದಿ ಮತ್ತು ವಿಭಾಗ Y – 12 ಮಂದಿ.
2) ಆವರಿಸಿದ ಪ್ರದೇಶ : ವಿಭಾಗ X – 400 ಚ.ಅಡಿ ಮತ್ತು ವಿಭಾಗ Y – 800 ಚ.ಅಡಿ.
3) ರೂ. 50,000 ಬೆಲೆಯ ಯಂತ್ರದ ಮೇಲೆ ಶೇ. 10 ಮತ್ತು ರೂ. 15,000 ಬೆಲೆಯ ಪೀಠೋಪಕರಣಗಳ ಮೇಲೆ ಶೇ. 20 ಸವಕಳಿಯನ್ನು ಎರಡೂ ವಿಭಾಗಗಳ ಮಧ್ಯೆ ಸರಿಸಮನಾಗಿ ಹಂಚಿರಿ.
4) 31-12-2022 ರಂದು ಅಂತಿಮ ಸರಕು ದಾಸ್ತಾನು : ವಿಭಾಗ X ರೂ. 8,000 ಮತ್ತು ವಿಭಾಗ Y ರೂ. 4,000.
5) ಅಂತರ ವಿಭಾಗೀಯ ವರ್ಗಾವಣೆಗಳು : ವಿಭಾಗ X ಯಿಂದ ವಿಭಾಗ Y ಗೆ ರೂ. 10,000 ಇದು ಮೇಲೆ ಕೊಟ್ಟಿರುವ ವಿವರಗಳಲ್ಲಿ ಸೇರಿಲ್ಲ.
6) ಅನುಪಾತವನ್ನು ಲೆಕ್ಕಮಾಡುವಾಗ ಅಂತರ-ವಿಭಾಗೀಯ ವರ್ಗಾವಣೆಗಳನ್ನು ಪರಿಗಣಿಸಬೇಡಿ.

10. ಬೆಂಗಳೂರಿನ ಶಾಖೆಗೆ ಸಂಬಂಧಿಸಿದ 31-12-2022 ರ ವಿವರಗಳು ಈ ಕೆಳಕಂಡಂತಿವೆ. ಅವುಗಳ ಸಹಾಯದಿಂದ ಪ್ರಧಾನ ಕಛೇರಿಯಲ್ಲಿ ಬೆಂಗಳೂರಿನ ಶಾಖೆಯ ಖಾತೆಯನ್ನು ತೆರೆಯಿರಿ.

| ವಿವರಗಳು | ರೂ. |
|---|---|
| ಶಾಖೆಯ ದಾಸ್ತಾನು 1-1-2022 | 30,000 |
| ಶಾಖೆಯ ಋಣಿಗಳು 1-1-2022 | 60,000 |
| ಶಾಖೆಯ ಚಿಲ್ಲರೆ ನಗದು 1-1-2022 | 600 |
| ಶಾಖೆಗೆ 2022 ರಲ್ಲಿ ಕಳುಹಿಸಲ್ಪಟ್ಟ ಸರಕುಗಳು | 5,04,000 |
| ನಗದು ಮಾರಾಟ 2022 | 1,20,000 |
| ಋಣಿಗಳಿಂದ ಪಡೆದ ನಗದು 2022 | 4,20,000 |
| ವರ್ಷದಲ್ಲಿ ಉದ್ದರಿ ಮಾರಾಟ 2022 | 4,56,000 |

| | | |
|---|---|---|
| ಶಾಖೆಗೆ ಕಳುಹಿಸಲ್ಪಟ್ಟ ಚೆಕ್ಕುಗಳು : | | |
| ಸಂಬಳಕ್ಕೆ | 18,000 | |
| ಬಾಡಿಗೆ ಮತ್ತು ದರಗಳಿಗೆ | 3,000 | |
| ಚಿಲ್ಲರೆ ನಗದು | 2,200 | 23,200 |
| ಶಾಖೆಯಿಂದ ಹಿಂದಿರುಗಿಸಿದ ಸರಕುಗಳ ಮೌಲ್ಯ | | 4,000 |
| ಶಾಖೆಯ ದಾಸ್ತಾನು 31-12-2022 | | 50,000 |
| ಶಾಖೆಯ ಚಿಲ್ಲರೆ ನಗದು 31-12-2022 | | 400 |
| ಶಾಖೆಯ ಋಣಿಗಳು 31-12-2022 | | 96,000 |

11. ಮಾಲೂರಿನ ಗಣೇಶ್ ಟ್ರೇಡರ್ಸ್‌ನವರು ತಮ್ಮ ಕೆಜಿಎಫ್ ಶಾಖೆಗೆ ಸರಕನ್ನು ಮಾರಾಟ ಬೆಲೆಯ ಮೇಲೆ ಶೇ. 20ರಷ್ಟನ್ನು ಸೇರಿಸಿ ಕಳುಹಿಸಿರುತ್ತಾರೆ. ಶಾಖೆಯು ದೈನಂದಿನ ವ್ಯವಹಾರಗಳಿಂದ ಗಳಿಸಿದ ಎಲ್ಲಾ ನಗದನ್ನು ಅಂದೇ ಪ್ರಧಾನ ಕಛೇರಿ ಖಾತೆಯಲ್ಲಿ ಜಮಾ ಮಾಡುವಂತೆ ಸೂಚಿಸಲಾಗಿದೆ ಮತ್ತು ಹೆಚ್ಚಿನ ಎಲ್ಲಾ ಪಾವತಿಗಳನ್ನು ಪ್ರಧಾನ ಕಛೇರಿಯಿಂದಲೇ ಮಾಡಲಾಗುತ್ತಿದ್ದು, ಚಿಲ್ಲರೆ ಖರ್ಚುಗಳನ್ನು ಮಾತ್ರ ಶಾಖಾ ನಿರ್ವಾಹಕರೇ ಪಾವತಿಸುತ್ತಾರೆ. ಈ ಕೆಳಗೆ ನೀಡಲಾಗಿರುವ ಮಾಹಿತಿಯ ಆಧಾರದಿಂದ ಆ ಶಾಖೆಯ ಖಾತೆಯನ್ನು ತಯಾರಿಸಿ ಆಯವ್ಯಯವನ್ನು ಲೆಕ್ಕ ಹಾಕಿ.

| ದಾಸ್ತಾನು | ರೂ. |
|---|---|
| ಸರಕು ದಾಸ್ತಾನು 1-1-2022ರಂದು (ಮಾರಾಟ ಬೆಲೆಯಲ್ಲಿ) | 15,000 |
| ಚಿಲ್ಲರೆ ನಗದು 1-1-2022 | 300 |
| ಋಣಿಗಳು 1-1-2022ರಂದು | 8,500 |
| ಪೀಠೋಪಕರಣ 1-1-2022ರಂದು | 2,000 |
| ನಗದು ಮಾರಾಟ | 56,000 |
| ಒಟ್ಟು ಮಾರಾಟ | 88,000 |
| ಋಣಿಗಳಿಂದ ಬಂದ ಹಣ | 28,500 |
| ಪ್ರಧಾನ ಕಛೇರಿಯಿಂದ ರವಾನಿಸಿದ ಸರಕು | 80,000 |
| ಸೋಡಿ ಕೊಟ್ಟಿದ್ದು | 250 |
| ಚಿಲ್ಲರೆ ಖರ್ಚುಗಳು | 360 |
| ಶಾಖೆಯಿಂದ ವಾಪಸು ಮಾಡಲಾದ ಸರಕು | 1,000 |

| | | |
|---|---|---|
| ಸಂಬಳ ಬಾಕಿ, 31-12-2022 | | 400 |
| ಪ್ರಧಾನ ಕಛೇರಿಯಿಂದ ಪಾವತಿಸಲಾದ ಖರ್ಚುಗಳು | | |
| • ಬಾಡಿಗೆಗಾಗಿ | 2,400 | |
| • ಸಂಬಳಕ್ಕಾಗಿ | 4,200 | 6,600 |
| ಪೀಠೋಪಕರಣ ಖರೀದಿ 01-07-2022 | | 1,600 |
| ಸರಕು 31-12-2022ರಂದು (ಮಾರಾಟ ಬೆಲೆಯಲ್ಲಿ) | | 12,000 |
| ಸ್ವೀಕರಿಸಬಹುದಾದ ಬಿಲ್ಲುಗಳು (B/R) 31-12-2022 | | 2,000 |
| ಪೀಠೋಪಕರಣ ಮಾರಾಟ 01-07-2022 | | |
| (ಮಾರಾಟದ ದಿನ ಪುಸ್ತಕದ ಮೌಲ್ಯ ರೂ. 950) | | 900 |
| ಪೀಠೋಪಕರಣ ಸವಕಳಿ 10% ವರ್ಷಕ್ಕೆ | | |

## ಭಾಗ – ಡಿ

ಕೆಳಗಿನ ಉಪ-ಪ್ರಶ್ನೆಗಳಿಗೆ ಯಾವುದಾದರೂ ಒಂದಕ್ಕೆ ಉತ್ತರಿಸಿ. ಪ್ರತಿ ಪ್ರಶ್ನೆಯು **8** ಅಂಕಗಳನ್ನು ಹೊಂದಿರುತ್ತದೆ. **(1×8=8)**

12. A) ಯಾವುದಾದರೂ 4 ಭಾರತೀಯ ಲೆಕ್ಕಶಾಸ್ತ್ರ ಮಾನದಂಡಗಳನ್ನು ವಿವರಿಸಿ.

    B) ಒಂದು ಆಸ್ತಿ ಖರೀದಿಗೆ ಸಂಬಂಧಪಟ್ಟಂತೆ ಬಾಡಿಗೆ ಮಾರಾಟಗಾರರ ಮತ್ತು ಬಾಡಿಗೆ ಖರೀದಿದಾರರ ನಡುವೆ ಖರೀದಿ ಒಪ್ಪಂದವನ್ನು ತಯಾರಿಸಿ.